ಓಡಿಹೋದನಂತೆ. ಗುರುತು ಸಿಕ್ಕಬಾರದೆಂದು ಆತ ಮುಖಕ್ಕೆ ಬಟ್ಟೆ ಕಟ್ಟಿಕೊಂಡಿದ್ದನಂತೆ. ಹಾಡಹಗಲೇ ನಡೆದ ಕಳ್ಳತನ ಯತ್ನದಿಂದ ಆಕೆ ಆಘಾತಕ್ಕೊಳಗಾಗಿದ್ದಳು. ಆಕೆಯ ದೂರು ಕೇಳಿ ನನಗೆ ಸಂತೋಷವಾಯಿತು!

"ನಿಮ್ಮದು ಯಾವ ಶೂ?" ಪ್ರಶ್ನಿಸಿದೆ.

"ನಿಕ್ ಕಂಪನಿದ್ದು. ಮಾಡೆಲ್ ಹೆಸರು ನೆನಪಿಲ್ಲ." ತಿಮ್ಮಯ್ಯ ಉತ್ತರಿಸಿದ.

"ಸೆನೆಟರ್ ಅಲ್ವೇ?" ನನ್ನ ಪ್ರಶ್ನೆಗೆ ಆತ ಗೋಣು ಆಡಿಸಿದ!

ಆ ಕಳ್ಳ ಇನ್ನೂ ಶೂನ ಹಿಂದಿದ್ದಾನೆ!! ಡಿಸೋಜನ ಮೊಗದಲ್ಲಿ ಅಚ್ಚರಿ. ದೂರು ಸ್ವೀಕರಿಸುವಂತೆ ಮುಖ್ಯ ಪೇದೆಗೆ ಸೂಚನೆ ನೀಡಿ, ಕೊಲೆ ಪ್ರಕರಣದ ತನಿಖೆಯಾದೊಡನೆ ಕೈಗೆತ್ತಿಕೊಳ್ಳುವುದಾಗಿ ಡಿಸೋಜ ಭರವಸೆ ನೀಡಿದ. ನಾನು ತಿಮ್ಮಯ್ಯನ ವಿಳಾಸ ಪಡೆದುಕೊಂಡು, ಉತ್ಸಾಹದಿಂದ ಹೊರಬಿದ್ದೆ.

ಠಾಣೆಯಲ್ಲಿ ನಡೆದುದನ್ನು ಕೇಳಿದ ಕರಮಚಂದ ತುಸು ಹೊತ್ತು ಮೌನವಾದ.

"ವೆರಿ ಗುಡ್, ಬಿದ್ದಪ್ಪ. ಈ ಎಡಗಾಲಿನ ಬೂಟಿನ ಹಿಂದೆ ಏನೋ ರಹಸ್ಯವಿರುವುದಂತೂ

